OS No.12/2020
PW-1

ದಿನಾಂಕ 16.01.2023 ರಂದು ಸಾಕ್ಷಿಯನ್ನು ಪನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ ಶ್ರೀ ಪಿಪಿಕೆ ಪ್ರತಿವಾದಿ ಪರ ವಕೀಲರಿಂದಃ**

ನಾನು ಮಂಗಳೂರದಲ್ಲಿರುವ ಕರ್ನಾಟಕ ಬ್ಯಾಂಕಿನ ಮುಖ್ಯ ಕಚೇರಿಯಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ 2005 ರಲ್ಲಿ ಬೀದರ ಜಿಲ್ಲೆಯ ಮಟಾಲಾ ಶಾಖೆಯಲ್ಲಿ ಮೊದಲಿಗೆ ಸೇವೆಗೆ ಸೇರಿರುತ್ತೇನೆ. ಆನಂತರ ನನಗೆ ಜಾರ್ಖಂಡ ರಾಜ್ಯದ ರಾಂಚಿ ಶಾಖೆಗೆ ವರ್ಗಾವಣೆಯಾಗಿರುತ್ತದೆ. ರಾಂಚಿಯಿಂದ ಕರ್ನಾಟಕದ ಕುಮಟಾ ಶಾಖೆಗೆ ವರ್ಗಾವಣೆಯಾಗಿರುತ್ತದೆ. ಆನಂತರ ನನಗೆ ಕಲಬುರಗಿ ಶಾಖೆಗೆ ವರ್ಗಾವಣೆಯಾಗಿರುತ್ತದೆ. ನಾನು ಸಾಮಾನ್ಯವಾಗಿ 3–ವರ್ಷಗಳ ಕಾಲ ನನ್ನ ವರ್ಗಾವಣೆಯಾದ ಸ್ಥಳಗಳಲ್ಲಿ ಕೆಲಸ ಮಾಡಿರುತ್ತೇನೆ. ನಾನು ಬೇರೆ ಬೇರೆ ನಗರಗಳ ಬ್ಯಾಂಕಗಳಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನಾನು ವೈಯಕ್ತಿಕವಾಗಿ ದಾವಾ ಸ್ವತ್ತುಗಳ ಸ್ವಾಧೀನದಲ್ಲಿಲ್ಲ ಆದರೆ ಆಳುಗಳ ಮೂಲಕ ದಾವಾ ಸ್ವತ್ತುಗಳಲ್ಲಿ ಕೆಲಸ ಮಾಡಿಸುತ್ತಿದ್ದೇನೆ.

ನಮ್ಮ ಕುಟುಂಬದ ಮೂಲ ಪುರುಷ ಗೋವಿಂದರಾವ ಎಂದರೆ ನಿಜ. ಸದರಿ ಗೋವಿಂದರಾವರವರಿಗೆ 5–ಜನ ಗಂಡು ಮಕ್ಕಳು ಎಂದರೆ ನಿಜ. ಅವರೆಂದರೆ ಭೀಮರಾವ, ಕಿಶನರಾವ, ಶ್ರೀನಿವಾಸರಾವ ಆದರೆ ಇನ್ನುಳಿದ ಇಬ್ಬರು ಜನ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಇನ್ನುಳಿದ ಇಬ್ಬರು ಜನ ಮಕ್ಕಳ ಹೆಸರು ಗೋಪಾಲರಾವ ಮತ್ತು ನರಸಿಂಗರಾವ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನಾನು ಆ ಸಮಯದಲ್ಲಿ ಚಿಕ್ಕವನಿದ್ದೆ ಎಂದು ನುಡಿಯುತ್ತಾರೆ. ಜೇವರ್ಗಿ ಬಿ. ಗ್ರಾಮದ ಸರ್ವೆ ನಂ.287 ರ ಜಮೀನು ಗೋವಿಂದರಾವರವರ ಹೆಸರಿನಿಂದ ಭೀಮರಾವರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ನೆನಪಿಲ್ಲ ನಾನು ಚಿಕ್ಕವನಿದ್ದೆ.

ಗೋಪಾಲರಾವ ಹಾಗೂ ನರಸಿಂಗರಾವರವರಿಗೆ ಅವರಾದ ಗ್ರಾಮದ ಜಮೀನುಗಳನ್ನು ಅವರ ಪಾಲಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಭೀಮರಾವರವರಿಗೆ ವಸಂತರಾವ ಹಾಗೂ ನಮ್ಮ ತಂದೆ ಮಾಣಿಕರಾವ ಇಬ್ಬರು ಮಕ್ಕಳು ಎಂದರೆ ನಿಜ.

ಕಿಶನರಾವರವರಿಗೆ ಅಂಬುಜಾ ಎನ್ನುವ ಮಗಳು ಹಾಗೂ ರಾಧಾಬಾಯಿ ಹೆಂಡತಿ ಆಗಬೇಕು ಎಂದರೆ ನಿಜ. ಪ್ರಸ್ತುತ ದಾವೆಯಲ್ಲಿ ಸದರಿ ಕಿಶನರಾವರವರ ಹೆಂಡತಿಯಾದ ರಾಧಾಬಾಯಿರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮ ಜಮೀನಿನ ಪಹಣಿಯಲ್ಲಿ ರಾಧಾಬಾಯಿರವರ ಹೆಸರು ಜಂಟಿ ಇರುವ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 3 ನೆ ಪ್ರತಿವಾದಿ ಲಕ್ಷ್ಮಿಬಾಯಿ ಶ್ರೀನಿವಾಸರವರ ಹೆಂಡತಿ ಹಾಗೂ 4 ನೇ ಪ್ರತಿವಾದಿ ಶಂಕರರಾವ ಶ್ರೀನಿವಾಸರಾವರವರ ಮಗ ಎಂದರೆ ನಿಜ. ಸರ್ವೆ ನಂ.287 ರ ಜಮೀನು ಉತ್ತರ ಭಾಗದಲ್ಲಿ ಅಗಲ ಹೆಚ್ಚಿದ್ದು ದಕ್ಷಿಣ ಭಾಗದಲ್ಲಿ ಅದರ ಅಗಲ ಕಡಿಮೆ ಇದೆ ಎಂದರೆ ನಿಜ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಸರ್ವೆ ನಂ.287 ರ ಜಮೀನಿನ ಸ್ಕೆಚ್ ದಾಖಲೆಯ ದೃಡಿಕೃತ ನಕಲಾಗಿದ್ದು ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡ ಕಾರಣ ಪ್ರತಿವಾದಿಯರ ಪರವಾಗಿ ನಿಡಿ-1 ಎಂದು ಗುರುತಿಸಲಾಯಿತು.

ನಿಡಿ-1 ರಲ್ಲಿ ತೋರಿಸಲಾದ ಈಗ A, B, C, D ಎಂದು ಉಲ್ಲೇಖಿಸಲಾದ ಜಮೀನಿನ ವಿಸ್ತೀರ್ಣ 9-ಎಕರೆ ಇದೆ ಎಂದರೆ ಸರಿಯಲ್ಲ. ಅದು A B C D ಎಂದು ಗುರುತಿಸಲಾದ ಜಮೀನಿನ ವಿಸ್ತೀರ್ಣ ಎಷ್ಟಿದೆ ಎಂದು ಅಳತೆ ಮಾಡಿಲ್ಲ. ನಿಡಿ-1 ರಲ್ಲಿ ಈಗ ಗುರುತಿಸಲಾದ A B C D ಯಲ್ಲಿನ ಜಮೀನಿನ ವಿಸ್ತೀರ್ಣ 5-ಎಕರೆ 22-ಗುಂಟೆ ಇದೆ ಎಂದು ಘೋಷಣೆ ಕೋರಿ ಈ ದಾವೆಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ನಿಜ. ನಿಡಿ-1 ರಲ್ಲಿ ಗುರುತಿಸಲಾದ A B C D ಜಮೀನಿನ ದಕ್ಷಿಣದಲ್ಲಿ ವಸಂತರಾವರವರ ಜಮೀನಿದೆ ಎಂದರೆ ಸಾಕ್ಷಿ ಈಗ 1 ನೆ ಪ್ರತಿವಾದಿಯವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

ನಮ್ಮ ತಾತ ಭೀಮರಾವ ತಂದೆ ಗೋವಿಂದರಾವ ದಪ್ತರಬಂದರವರಿಗೆ ಸರ್ವೆ ನಂ.287/ಎ ನಲ್ಲಿ 11-ಎಕರೆ 04-ಗುಂಟೆ ಜಮೀನು ಬಂದಿರುತ್ತದೆ ಎಂದರೆ ನಿಜ. ಸದರಿ 11-ಎಕರೆ 4-ಗುಂಟೆ ಜಮೀನಿನಲ್ಲಿ ಭೀಮರಾವರವರು ಮಾಣಿಕರಾವರವರ ಹೆಸರಿಗೆ 5-ಎಕರೆ 22-ಗುಂಟೆ ಹಾಗೂ ವಸಂತರಾವರವರ ಹೆಸರಿಗೆ 5-ಎಕರೆ 22-ಗುಂಟೆ ಜಮೀನು ಪಾಲು ಮಾಡಿಕೊಟ್ಟಿದ್ದರು ಎಂದರೆ ನಿಜ.

ಭೀಮರಾವರವರಿಗೆ ಸರ್ವೆ ನಂ.287/ಎ ರ 11-ಎಕರೆ 4-ಗುಂಟೆ ಜಮೀನು ಪಿತ್ರಾರ್ಜಿತವಾಗಿ ವಿಭಾಗದಲ್ಲಿ ಬಂದಿರುತ್ತದೆ. ಸದರಿ ವಿಭಾಗದಲ್ಲಿ ಭೀಮರಾವರವರಿಗೆ

ಎಷ್ಟು ಎಕರೆ ಯಾವ ದಿಕ್ಕಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ದಕ್ಷಿಣಕ್ಕೆ ಎಕರೆಗ 11–ಎಕರೆ 4–ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಭೀಮರಾವರವರಿಗೆ ದಕ್ಷಿಣದ 11–ಎಕರೆ 4–ಗುಂಟೆ ಜಮೀನು ಬಂದಿದೆ ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ನಿಜ. ಭೀಮರಾವರವರಿಗೆ ಶ್ರೀನಿವಾಸರಾವರವರ ಜಮೀನಿನ ದಕ್ಷಿಣಕ್ಕೆ 2–ಎಕರೆ ಹಾಗೂ ಸರ್ವೆ ನಂ.287 ರ ಸಂಪೂರ್ಣ ಜಮೀನಿನ ದಕ್ಷಿಣಕ್ಕೆ 9–ಎಕರೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಾಣಿಕರಾವರವರಿಗೆ ಶ್ರೀನಿವಾಸರಾವರವರ ಜಮೀನಿನ ದಕ್ಷಿಣಕ್ಕೆ 2–ಎಕರೆ ಹಾಗೂ ಸರ್ವೆ ನಂ.287 ರ ಒಟ್ಟು ಜಮೀನಿನ ದಕ್ಷಿಣಕ್ಕೆ ಸುಲಬಾಬಾಯಿರವರ 5–ಎಕರೆ 20–ಗುಂಟೆ ಜಮೀನು ಬಿಟ್ಟು ಉತ್ತರಕ್ಕೆ ಉಳಿದ ಜಮೀನು ನಮಗೆ ಬಂದಿರುತ್ತದೆ ಎಂದರೆ ಸಾಕ್ಷಿ ಉತ್ತರದ ಭಾಗದ ಜಮೀನು ನಮಗೆ ಬಂದಿರುತ್ತದೆ ಆದರೆ ಅದರ ವಿಸ್ತೀರ್ಣ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ದಿನಾಂಕ 21.12.2022 ರಂದು ದಾವಾ ಸ್ವತ್ತನ್ನು ಅಳತೆ ಮಾಡಲು ಭೂ ಮಾಪಕರ ಬಳಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ನಿಜ. ಸದರಿ ಅಳತೆ ಅರ್ಜಿಯನ್ನು ಬಸನಗೌಡ ತಂದೆ ರುದ್ರಗೌಡ ಆಲೂರರವರಿಗೆ 20–ಗುಂಟೆ ಜಮೀನು ಮಾರಾಟ ಮಾಡುವ ಉದ್ದೇಶದಿಂದ ನೀಡಿರುತ್ತೇನೆ ಎಂದರೆ ಸಾಕ್ಷಿ ಮಾರಾಟ ಮಾಡುವ ಉದ್ದೇಶದಿಂದ ನೀಡಿಲ್ಲ ಆದರೆ ಸದರಿ ಬಸಣ್ಣಗೌಡರವರ ಉಪಯೋಗದ ಉದ್ದೇಶಕ್ಕಾಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಅಳತೆ ಅರ್ಜಿ ನೀಡಿದರ ಮೇಲೆ ಜಮೀನಿನ ಅಕ್ಕಪಕ್ಕದವರಿಗೆ ನೀಡಿದ ನೋಟಿಸಾಗಿದ್ದು ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು ಪ್ರತಿವಾದಿ ಪರ ನಿಡಿ–2 ಎಂದು ಗುರುತಿಸಲಾಯಿತು. ನಿಡಿ–2 ರ ದಾಖಲೆಯಲ್ಲಿ ಅರ್ಜಿಯ ಉದ್ದೇಶ ಕ್ರಯ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಉಪಯೋಗದ ಉದ್ದೇಶಕ್ಕಾಗಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನ ಮಧ್ಯಭಾಗದಿಂದ ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ಬೈಪಾಸ ರಸ್ತೆ ಬಂದಿರುತ್ತದೆ ಎಂದರೆ ನಿಜ. ನಿಡಿ–1 ರಲ್ಲಿ ನಮೂದಿಸಿದ ಎ ಬಿಂದು ಮೇಲೆ ಬಸನಗೌಡರವರಿಗೆ ಜಮೀನಿದೆ ಎಂದರೆ ನಿಜ. ನಿಡಿ–1 ರಲ್ಲಿ ನಮೂದಿಸಲಾದ ಎ ಬಿಂದುವಿನ ಸ್ವಲ್ಪ ಕೆಳಭಾಗದಿಂದ ಬಿ ಬಿಂದುವರೆಗೆ ಬಸನಗೌಡರವರಿಗೆ ನೀಡಿದ 20–

ಗುಂಟೆ ಜಮೀನು ಬರುತ್ತದೆ ಎಂದರೆ ಸಾಕ್ಷಿ ವಿಸ್ತೀರ್ಣ ಗೊತ್ತಿಲ್ಲ. ಆದರೆ ಬಸನಗೌಡರವರ ಉಪಯೋಗಕ್ಕೆ ನೀಡಿದ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮದ್ಯಾಹ್ನ 2.05 ಗಂಟೆ ಸಮಯವಾಗಿರುವುದರಿಂದ ಪಾಟಿ ಸವಾಲು 3.00 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಜೇವರ್ಗಿ